# <u>ಕರ್ನಾಟಕ ವಿಧಾನ ಪರಿಷತ್ತು</u>

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 408 (481) |
| ಸದಸ್ಯರ ಹೆಸರು | : ಶ್ರೀ ತಿಪ್ಪಣ್ಣಪ್ಪ ಕಮಕನೂರು (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | :ಉಪ ಮುಖ್ಯಮಂತ್ರಿಗಳು, ಕಂದಾಯ ಹಾಗೂ ಕ್ರೀಡಾ ಇಲಾಖೆ. |
| ಉತ್ತರಿಸುವ ದಿನಾಂಕ | : 19.08.2026 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಜಿಲ್ಲೆಯಲ್ಲಿ ಹೊಸ ತಾಲ್ಲೂಕುಗಳಿಗೆ ಮಿನಿ ವಿಧಾನಸೌಧ ನಿರ್ಮಾಣವಾಗದೆ ಇರುವುದು ಹಾಗೂ ಅವಶ್ಯ ಇರುವ ಸಿಬ್ಬಂದಿಗಳನ್ನು ನೇಮಿಸದೆ ಇರುವುದರಿಂದ ಈ ತಾಲ್ಲೂಕುಗಳ ಕೆಲಸ ಕಾರ್ಯಗಳಿಗೆ ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ) | ಕಾಳಗಿ, ಕಮಲಾಪೂರ, ಯಡ್ರಾಮಿ, ಶಹಬಾದ್ ಈ ತಾಲ್ಲೂಕುಗಳಿಗೆ ಯಾವ ಯಾವ ಮೂಲ ಸೌಲಭ್ಯಗಳು ಆಗಬೇಕಾಗಿದೆ; ಎಷ್ಟು ಸಿಬ್ಬಂದಿಗಳು ಬೇಕಾಗಿದೆ; ತಾಲ್ಲೂಕುವಾರು ವಿವರ ಒದಗಿಸುವುದು; ಇವುಗಳನ್ನು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಕ್ರಮ ಜರುಗಿಸಲಾಗುವುದು; | ಕಲಬುರಗಿ ಜಿಲ್ಲೆಯ ಕಾಳಗಿ, ಕಮಲಾಪುರ, ಯಡ್ರಾಮಿ ಮತ್ತು ಶಹಾಬಾದ್ ತಾಲ್ಲೂಕುಗಳಲ್ಲಿ ಪ್ರಜಾಸೌಧ ಕಟ್ಟಡವನ್ನು Type-A (Fully Furnished) ಮಾದರಿಯಲ್ಲಿ ತಲಾ ರೂ.8.60 ಕೋಟಿಗಳ ಅಂದಾಜು ಮೊತ್ತದಲ್ಲಿ ನಿರ್ಮಿಸಲು ಕ್ರಮವಾಗಿ ಸರ್ಕಾರದ ಆದೇಶ ಸಂಖ್ಯೆ:ಕಂಇ 48 ಡಬ್ಲ್ಯೂಬಿಆರ್ 2024, ದಿನಾಂಕ:18.12.2024, ಆದೇಶ ಸಂಖ್ಯೆ: ಕಂಇ 129 ಡಬ್ಲ್ಯೂಬಿಆರ್ 2024, ದಿನಾಂಕ:17.12.2024, ಆದೇಶ ಸಂಖ್ಯೆ: ಕಂಇ 24 ಡಬ್ಲ್ಯೂಬಿಆರ್ 2023, ದಿನಾಂಕ:17.12.2024 ಮತ್ತು ಆದೇಶ ಸಂಖ್ಯೆ: ಕಂಇ 71 ಡಬ್ಲ್ಯೂಬಿಆರ್ 2023, ದಿನಾಂಕ:17.12.2024ರಲ್ಲಿ ಕರ್ನಾಟಕ ಗೃಹ ಮಂಡಳಿ ವತಿಯಿಂದ ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಗುತ್ತಿಗೆ ಅಧಿಸೂಚನೆಯಲ್ಲಿ ಸದರಿ ಕಟ್ಟಡ ಕಾಮಗಾರಿಯನು ಪೂರ್ಣಗೊಳಿಸಲು 11 ತಿಂಗಳ ಕಾಲಾವಕಾಶವನ್ನು ನಿಗಧಿಪಡಿಸಲಾಗುವುದು.<br>ತಾಲ್ಲೂಕವಾರು ಸಿಬ್ಬಂದಿಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ. |
| ಇ) | ಆರಕ್ಷಕ ಠಾಣೆ, ಅರಣ್ಯ ಇಲಾಖೆ ಕಚೇರಿ ಇತ್ಯಾಧಿಯಾಗಿ ತಾಲ್ಲೂಕು ಮಟ್ಟದ ಎಲ್ಲಾ ಸರ್ಕಾರಿ ಕಛೇರಿಗಳು ಮಿನಿ ವಿಧಾನ ಸೌಧದಲ್ಲೇ ಕಡಾಯವಾಗಿ ಇರುವ ರೀತಿಯಲ್ಲಿ ಹೊಸ ಹೊಸ ವಿನ್ಯಾಸದೊಂದಿಗೆ ಇನ್ನೂ ವಿಶಾಲವಾದ ಮಿನಿ ವಿಧಾನಸೌಧದ ರಚನೆಗೆ ಸರ್ಕಾರ ಮುಂದಾಗುವುದೇ ? | ಸರ್ಕಾರದ ಆದೇಶ ಸಂಖ್ಯೆ:ಕಂಇ 85 ಡಬ್ಲ್ಯೂಬಿಆರ್ 2024, ದಿನಾಂಕ:05.10.2024ರಲ್ಲಿ ಹೊಸದಾಗಿ ರಚನೆಯಾದ ತಾಲ್ಲೂಕುಗಳಲ್ಲಿ Type-A ಮಾದರಿಯಲ್ಲಿ ಹೊಸದಾಗಿ ರಚನೆಯಾದ ತಾಲ್ಲೂಕುಗಳಲ್ಲಿ ಹೊಸ ತಾಲ್ಲೂಕು ಆಡಳಿತ ಸೌಧದಲ್ಲಿ ನೆಲಮಹಡಿಯನ್ನು ಪೂರ್ಣ ಪ್ರಮಾಣದಲ್ಲಿ ಹಾಗೂ ಮೊದಲನೇ ಮಹಡಿಯ ಅರ್ಧ ಭಾಗದಲ್ಲಿ ಒಟ್ಟು 1735 ಚ.ಮೀ. ವಿಸ್ತೀರ್ಣದ ಕಟ್ಟಡವನ್ನು ರೂ. 8.60 ಕೋಟಿ ಅಂದಾಜು ಮೊತ್ತದಲ್ಲಿ ನಿರ್ಮಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ಬೇರೆ ಕಛೇರಿಗಳು ಮಂಜೂರಾದಂತಹ ಸಂದರ್ಭದಲ್ಲಿ ಭವಿಷ್ಯದಲ್ಲಿ ಮೊದಲನೇ ಮಹಡಿಯ ಉಳಿದ ಜಾಗದಲ್ಲಿ ಕಛೇರಿಗಳನ್ನು ನಿರ್ಮಿಸಲು ಅವಕಾಶ ಕಲ್ಪಿಸಲಾಗಿದೆ. |

**ಸಂಖ್ಯೆ: ಕಂಇ 122 ಎಮ್ಎಸ್‌ಟಿ 2026**

(ಡಾ|| ಜಿ.ಪರಮೇಶ್ವರ)
ಉಪ ಮುಖ್ಯಮಂತ್ರಿಗಳು ಕಂದಾಯ
ಹಾಗೂ ಯುವಜನಸೇವಾ ಮತ್ತು
ಕ್ರೀಡಾ ಇಲಾಖೆ.

# <u>ಅನುಬಂಧ</u>

ಕಲಬುರಗಿ ಜಿಲ್ಲೆಯ ಹೊಸ ತಾಲ್ಲೂಕುಗಳಾದ ಕಮಲಾಪುರ, ಯಡ್ರಾಮಿ, ಕಾಳಗಿ ಹಾಗೂ ಶಹಾಬಾದ ತಾಲ್ಲೂಕುಗಳಿಗೆ ಬೇಕಾಗಿರುವ ಸಿಬ್ಬಂದಿಗಳ ವಿವರ:

| ಕ್ರ.ಸಂ | ಹೊಸ ತಾಲ್ಲೂಕು | ದ್ವಿದಸ | | | ಬೆರಳಚ್ಚುಗಾರರು | | | ವಾಹನ ಚಾಲಕರು | | | "ಡಿ" ಗ್ರೂಪ್ | | |
|---|---|---|---|---|---|---|---|---|---|---|---|---|---|
| | | ಮಂ | ಭರ್ತಿ | ಖಾಲಿ | ಮಂ | ಭರ್ತಿ | ಖಾಲಿ | ಮಂ | ಭರ್ತಿ | ಖಾಲಿ | ಮಂ | ಭರ್ತಿ | ಖಾಲಿ |
| 1 | ಕಾಳಗಿ | 6 | 3 | 3 | 1 | 0 | 1 | 1 | 0 | 1 | 5 | 3 | 2 |
| 2 | ಕಮಲಾಪುರ | 5 | 5 | 0 | 1 | 0 | 1 | 1 | 0 | 1 | 4 | 1 | 3 |
| 3 | ಯಡ್ರಾಮಿ | 5 | 5 | 0 | 1 | 0 | 1 | 1 | 0 | 1 | 4 | 0 | 4 |
| 4 | ಶಹಬಾದ್ | 5 | 3 | 2 | 1 | 0 | 1 | 1 | 0 | 1 | 4 | 0 | 4 |
| | ಒಟ್ಟು | 21 | 16 | 05 | 04 | 0 | 04 | 04 | 0 | 04 | 17 | 04 | 13 |